ಕೆ.ಎಸ್. ನಿಸಾರ್ ಅಹಮದ್ ಅವರ ಕಾವ್ಯದಲ್ಲಿ ಪರಕೀಯ ಪ್ರಜ್ಞೆ

ಮಾನಸ ಎಸ್.*

DOI: https://doi.org/10.5281/zenodo.24338758

ABSTRACT

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಕಾವ್ಯ, ಸಣ್ಣಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಮಕ್ಕಳ ಸಾಹಿತ್ಯ, ಅನುವಾದ ಮುಂತಾದ ಪ್ರಕಾರಗಳ ಮೂಲಕ ಕನ್ನಡ ಸಾಹಿತ್ಯ ಭರದಿಂದ ಹೊರಹೊಮ್ಮಲು ಆರಂಭವಾಯಿತು. ಈ ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಕಾವ್ಯ ಪ್ರಕಾರವು ಸಹೃದಯರನ್ನು ತನ್ನತ್ತ ಸೆಳೆಯಿತು. ನಾಡು–ನುಡಿ, ದೇಶಪ್ರೇಮ, ಸ್ವಾತಂತ್ರ್ಯ, ಸಮಾನತೆ, ನಿಸರ್ಗವರ್ಣನೆ, ಪ್ರೀತಿ–ಪ್ರೇಮ, ವಾಸ್ತವತೆ, ಸೌಹಾರ್ದತೆ ಹೀಗೆ ಅನೇಕ ಧೋರಣೆಯಿಂದ ತನ್ನ ಛಾಪನ್ನು ಮೂಡಿಸಿತು. ಸಮಕಾಲೀನ ಸಂವೇದನೆಗಳೊಂದಿಗೆ ಲೇಖಕರು ತನ್ನ ಪ್ರಖರವಾದ ಬರವಣಿಗೆಯ ಶಕ್ತಿಯೊಂದಿಗೆ ಸ್ಪಂದಿಸುವ ಮೂಲಕ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಶಿಖರಕ್ಕೇರಿಸಿದರು. ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಕವಿಗಳ ಸೇವೆ ಅವಿಸ್ಮರಣೀಯ. ಅಂತಹ ಕನ್ನಡಾಂಬೆಯ ಮಕ್ಕಳಾದ ಕನ್ನಡದ ಕಣ್ವ ಬಿ.ಎಂ. ಶ್ರೀ, ವರಕವಿ ಬೇಂದ್ರೆ, ನವ್ಯಕವಿ ಗೋಪಾಲಕೃಷ್ಣ ಅಡಿಗ, ಕೆ.ಎಸ್. ನರಸಿಂಹಸ್ವಾಮಿ ಮುಂತಾದ ಪ್ರಮುಖರಲ್ಲಿ ಕೆ.ಎಸ್. ನಿಸಾರ್ ಅಹಮದ್ ಅವರು ಸಹ ಒಬ್ಬರಾಗಿದ್ದಾರೆ. ಇವರ ಕಾವ್ಯಗಳಲ್ಲಿ ಪ್ರಕೃತಿ ವರ್ಣನೆ, ಭಾವಗೀತೆಯ ಸ್ವರೂಪ, ಸಾಮಾಜಿಕ ಮತ್ತು ರಾಜಕೀಯ ವಿಡಂಬನೆ, ಕೋಮುವಾದ, ಸೌಹಾರ್ದ, ಸಾಂಸ್ಕೃತಿಕ ಸಂಕಷ್ಟಗಳು, ಪರಕೀಯಪ್ರಜ್ಞೆ ಹೀಗೆ ವಿಭಿನ್ನ ಬಗೆಯ ಚಿಂತನೆಗಳನ್ನು ಇವರ ಕಾವ್ಯಗಳಲ್ಲಿ ಕಾಣಬಹುದು.

KEYWORDS: ಕೆ.ಎಸ್. ನಿಸಾರ್ ಅಹಮದ್, ಕಾವ್ಯದಲ್ಲಿ ಪರಕೀಯ ಪ್ರಜ್ಞೆ, ನಿಮ್ಮೊಡನಿದ್ದೂ ನಿಮ್ಮಂತಾಗದೆ, ಸವತಿ ಮಕ್ಕಳ ಹಾಗೆ, ನಾನೆಂಬ ಪರಕೀಯ.

* **ಮಾನಸ ಎಸ್.**, ಸಂಶೋಧನಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ಭಾರತೀಯ ಸಾಹಿತ್ಯದ ಸಮುದ್ರದಲ್ಲಿ ಕನ್ನಡ ಸಾಹಿತ್ಯ ತನ್ನದೇ ಆದ ಸತ್ವ ಹಾಗೂ ಶಕ್ತಿಯಿಂದ ಸ್ವಂತ ಅಸ್ತಿತ್ವವನ್ನು ಸಮರ್ಥವಾಗಿ ಪ್ರದರ್ಶಿಸಿ, ಈವರೆಗೆ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿದೆ. ಎರಡು ಸಾವಿರ ವರ್ಷಗಳ ಸುದೀರ್ಘ ಪರಂಪರೆ ಕನ್ನಡಕ್ಕಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಸಾಹಿತ್ಯ ಹೀಗೆ ವೈವಿಧ್ಯಮಯ ಪ್ರಕಾರಗಳಲ್ಲಿ ಕಾಲಕಾಲಕ್ಕೆ ತನ್ನ ಅಭಿವ್ಯಕ್ತಿಯನ್ನು ಹೊರಹಾಕುತ್ತಾ ಸಾಗಿ ಬಂದಿದೆ. ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ದೇಶೀಯ ಹಾಗೂ ವಿದೇಶೀಯ ಪ್ರೇರಣೆಗಳೊಂದಿಗೆ ಹೊರಹೊಮ್ಮಿದ ಕನ್ನಡ ಸಾಹಿತ್ಯ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡು ಗಮನ ಸೆಳೆದದ್ದು ಮಹತ್ವದ ಸಂಗತಿ.

ನಿಸಾರರು ಕನ್ನಡವನ್ನು ಕನ್ನಡಾಂಬೆಯನ್ನು ಭಕ್ತಿಪೂರ್ವಕವಾಗಿ, ಅಭಿಮಾನಪೂರ್ವಕವಾಗಿ ಆರಾಧಿಸಿದ ಅಪೂರ್ವ ಬರಹಗಾರರು. ಕನ್ನಡ ಸಾಹಿತ್ಯಕ್ಕೆ ಅವರ ಕೊಡುಗೆ ನಿತ್ಯಹಸಿರಾದದ್ದು ಎಂದರೆ ತಪ್ಪಾಗಲಾರದು. 'ನಿತ್ಯೋತ್ಸವ ಕವಿ' ಎಂದೇ ಪ್ರಸಿದ್ಧರಾದ ಕೆ.ಎಸ್. ನಿಸಾರ್ ಅಹಮದ್ ಅವರ ಕಾವ್ಯಗಳ ರಚನೆ ವಿಭಿನ್ನ ಹಾಗೂ ವೈಶಿಷ್ಟ್ಯಪೂರ್ಣವಾದವು.

ನಿಸಾರ್ ಅವರ ಮೊದಲ ಕವನ ಸಂಕಲನ 'ಮನಸ್ಸು ಗಾಂಧಿಬಜಾರು' ಇದು ಪ್ರಕಟವಾದದ್ದು 1969ರಲ್ಲಿ. ಅಲ್ಲಿಂದ ಅವರ ಒಟ್ಟು ಒಂಬತ್ತು ಕವನ ಸಂಕಲನಗಳು ಹೊರಬಂದಿವೆ. ಈ ಒಂಬತ್ತು ಕವನ ಸಂಕಲನಗಳ ಎಲ್ಲಾ ಕವಿತೆಗಳ ಜೊತೆಗೆ ಈವರೆಗೆ ಯಾವ ಕವನ ಸಂಕಲನದಲ್ಲೂ ಸೇರಿರದ ಕೆಲವು ಕವಿತೆಗಳು ಮತ್ತು ಅನುವಾದಿತ ಕವಿತೆಗಳು, ಕೆ.ಎಸ್. ನಿಸಾರ್ ಅಹಮದ್ ಅವರ 'ಸಮಗ್ರ ಕವಿತೆಗಳು' ಎಂಬ ಕೃತಿಯ ಮೂಲಕ 2006ರಲ್ಲಿ ಪ್ರಕಟವಾಗಿವೆ.

ಆಯ್ದ ಕವನಗಳಲ್ಲಿ ಪರಕೀಯಪ್ರಜ್ಞೆಯ ವಿಶ್ಲೇಷಣೆ

ನಿಸಾರ್ ಅವರು ಬರೆಯಲು ಆರಂಭಿಸಿದ್ದು ನವ್ಯಕಾವ್ಯದ ಉತ್ಕರ್ಷದ ಕಾಲದಲ್ಲಿ. ಪ್ರಸ್ತುತ ಲೇಖನದಲ್ಲಿ ಇವರ ಕಾವ್ಯದಲ್ಲಿ ಕಂಡುಬರುವಂತಹ ಪರಕೀಯಪ್ರಜ್ಞೆಯನ್ನು ಕುರಿತು ಚರ್ಚಿಸಲಾಗಿದೆ. ಅವರ ನಿಮ್ಮೊಡನಿದ್ದೂ ನಿಮ್ಮಂತಾಗದೆ, ನಾನೆಂಬ ಪರಕೀಯ, ರಂಗೋಲಿ ಮತ್ತು ಮಗ, ಸವತಿಯ ಮಕ್ಕಳ ಹಾಗೆ, ಇಬ್ಬಂದಿ, ಹೀಗೆ ಅನೇಕ ಕವಿತೆಗಳಲ್ಲಿ ಎರಡು ಭಿನ್ನ ಸಂಸ್ಕೃತಿಗಳ ನಡುವಿನ ಸಂಘರ್ಷವನ್ನು ಗುರುತಿಸುತ್ತಾರಾದರೂ ಅದು ಅವರ ಕಾವ್ಯದ ಮೂಲ ಧಾತುವಾಗಿಲ್ಲ. ಅವರ ಕಾವ್ಯ ಸಂವೇದನೆ ಆಕಾರ ಪಡೆದ ರೀತಿಯಾಗಿದೆ ಎನ್ನಬಹುದು.

ನಿಸಾರರು ಮೊದಲು ಬರೆಯುವ ಕಾವ್ಯವು ಸಾಂಪ್ರದಾಯಿಕ ಧರ್ಮದ ಹಿಡಿತಕ್ಕೆ ಸಿಲುಕುವ ಆತಂಕ ಹಾಗೂ ಅದರಿಂದ ತಪ್ಪಿಸಿಕೊಳ್ಳುವ ಸಂಕಲ್ಪದಿಂದ ಶುರುವಾಗುತ್ತದೆ. ನಿಸಾರರ ಜನ್ಮದ ಹಿನ್ನೆಲೆ ನಮ್ಮ ಸಾಮಾಜಿಕ ಪರಿಸರದಲ್ಲಿ ಅವರನ್ನು ಫಕೀರನಂತೆ ಕಂಡದ್ದು ಅಲ್ಲದೆ ಅನೇಕ ರೀತಿಯ ಸಾಂಸ್ಕೃತಿಕ ಸಂಕಷ್ಟಗಳನ್ನು

ತಂದೊಡ್ಡುತ್ತದೆ. ಅಂತಹ ಕ್ಲೇಶಗಳ ಚಿತ್ರಣ 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವನದಲ್ಲಿ ಕಂಡುಬರುತ್ತದೆ.

ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲಿ ಬೇರೊತ್ತಿದರೂ ಬೀಗಿ
ಪರಕೀಯನಾಗಿ ತಲೆಯೆತ್ತುವುದಿದೆ ನೋಡಿ
ಅದು ಬಹು ಕಷ್ಟದ ಕೆಲಸ.

ಈ ಕವನದ ಮೂಲಕ ಬಹುಸಂಖ್ಯಾತ ಹಿಂದೂ ಸಮಾಜದ ನಡುವೆ ಸಂಶಯಕ್ಕೀಡಾದ ಅಲ್ಪಸಂಖ್ಯಾತ ಮುಸ್ಲಿಂ ಜನಾಂಗಕ್ಕೆ ಸೇರಿದ ವ್ಯಕ್ತಿಯಾಗಿ ಅನುಭವಿಸಿದ ಸಂಕಷ್ಟದ ಚಿತ್ರಣ ಇಲ್ಲಿ ಕಾಣಬಹುದಾಗಿದೆ. ಪ್ರತಿಭೆಯ ಅಭಿವ್ಯಕ್ತಿಗೆ ಧರ್ಮದ ಬಣ್ಣ ಹಚ್ಚುವುದು ಸರಿಯಲ್ಲ. ಯಾವುದೇ ಒಬ್ಬ ವ್ಯಕ್ತಿಯಲ್ಲಿ ಪ್ರತಿಭೆ ಇದೆ ಎಂಬುದಾದರೆ ಆತನ ಧರ್ಮ, ಜಾತಿಯೊಡನೆ ಏನು ಸಂಬಂಧವಿದೆ, ನಮಗೆ ಅಲ್ಲಿ ಆತನ ಪ್ರತಿಭೆಯಷ್ಟೇ ಮುಖ್ಯವಾಗಬೇಕು ಅವನ ಜಾತಿ ಅಥವಾ ಧರ್ಮವಲ್ಲ ಎಂಬುದನ್ನು ಇಲ್ಲಿ ತಿಳಿಯಪಡಿಸಿದ್ದಾರೆ.

ಸವತಿ ಮಕ್ಕಳ ಹಾಗೆ ಕಾಣಬೇಡವ್ವ
ಸವತಿ ಮಕ್ಕಳ ಹಾಗೆ ಕಾಡಬೇಡ.....
ಹಳೆ ಹೇಳಿಕೆಯ ನಂಜೊತೆಯ ತಳಿಗಳ ಜೊತೆಯಲ್ಲೇ,
ಹೊಸ ಪೀಳಿಗೆಯ ನಿರಪಾಯ ಏಳಿಗೆಯ ಸುಳಿಗಳನು
ದೂಡುವೆ ಸಂಶಯದ ಖೆಡ್ಡಕ್ಕೆ ತಾಯಿ
ಲೇಬಲ್ ಅಂಟಿಸುವೆ ಗಡ್ಡಕ್ಕೆ ತಾಯಿ, ಸವತಿ ಮಕ್ಕಳ ಹಾಗೆ
(ಸವತಿ ಮಕ್ಕಳ ಹಾಗೆ)

ಈ ಕವನದಲ್ಲಿ ಅವಮಾನಕ್ಕೊಳಗಾದವರು ದಿನದ ಬದುಕಿನಲ್ಲಿ ಎದುರಿಸಬೇಕಾದ ಸಂಕಷ್ಟಗಳನ್ನು 'ಸವತಿ ಮಕ್ಕಳ ಹಾಗೆ' ಎಂಬ ಈ ಕವಿತೆಯ ಮೂಲಕ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಈ ಮಾತುಗಳು ಅವರು ಸಾಂಸ್ಕೃತಿಕವಾಗಿ ಅನುಭವಿಸಿದ್ದ ನೋವಿನ ಮಾತುಗಳಾಗಿವೆ. ತಮ್ಮನ್ನು ಪರಕೀಯರಂತೆ ಕಾಣುವುದು ಅದರ ಮೂಲಕ ಅನುಮಾನಕ್ಕೊಳಪಡಿಸುವುದು ಹಾಗೂ ಯಾರೋ ಕೆಲವರ ಕೃತ್ಯಗಳಿಗಾಗಿ ಅಂಥವರು ಸೇರಿದ ಸಮುದಾಯವನ್ನು ಅನುಮಾನದಿಂದ ಕಾಣುವ ಪ್ರವೃತ್ತಿ ಇತ್ತೀಚೆಗೆ ಹೆಚ್ಚಾಗುತ್ತಿದೆ. ಯಾವುದೇ ತಪ್ಪುಗಳಿಲ್ಲದೆ ಹೋದರೂ ದೋಷಾರೋಪಕ್ಕೆ ಗುರಿಯಾಗುವ ಮುಗ್ಧರ ಕಣ್ಣೀರು ಇಲ್ಲಿ ಧಾರೆಯಾಗಿರುವುದನ್ನು ಕಾಣಬಹುದು. ಇಂಥ ಸಂಶಯ ಅತಿಯಾದರೆ ಸಂಶಯಕ್ಕೆ ಗುರಿಯಾದವರಲ್ಲಿ ಕೆಲವರು ತಮ್ಮನ್ನು ಅದೇ ಬಗೆಯಲ್ಲಿ ಬದಲಾಯಿಸಿಕೊಳ್ಳುವ ಅಪಾಯವೂ ಇದೆ. ಆದ್ದರಿಂದ ಯಾರೋ ಕೆಲವರು ಮಾಡುವ ತಪ್ಪಿಗೆ ಇಡೀ ಸಮುದಾಯವನ್ನೇ ತಪ್ಪೆಂದು ದೂಡುವುದು ಸರಿಯಲ್ಲ ಎಂಬುದು ಈ ಕವನದ ಆಶಯವಾಗಿದೆ.

ನಿಸಾರರ ಕಾವ್ಯ ಕುರಿತು ಪ್ರೊ. ಎಂ.ವಿ. ಸೀತಾರಾಮಯ್ಯನವರು "ಆಧುನಿಕ ಕಾವ್ಯ ಪ್ರಪಂಚದಲ್ಲಿ ವಸ್ತು, ಶೈಲಿ, ಭಾಷೆ, ಅಭಿವ್ಯಕ್ತಿ– ಈ ಯಾವ ದೃಷ್ಟಿಯಿಂದ ನೋಡಿದರೂ ನಿಮ್ಮ ಕಾವ್ಯಕ್ಕೆ ನಿಮ್ಮದೇ ಆದ ಎರಡು ಸಂಸ್ಕೃತಿಗಳ ಜೀವಂತ ಸಮ್ಮಿಲನದ ಮುದ್ರೆಯಿದೆ" ಎಂದು ಹೇಳಿದ್ದಾರೆ. (ಸಮಗ್ರ ಕವಿತೆಗಳು ಕೆ.ಎಸ್. ನಿಸಾರ್ ಅಹಮದ್, ಸ್ವಯಂ ಸೇವೆಯ ಗಿಳಿಗಳು ಕವನ ಸಂಕಲನದ ಮುನ್ನುಡಿ).

ದಾಡಿ ಗಡ್ಡ ನಮಾಜಿನ ದಿವ್ಯ ಚಹರೆಯ,
ತುರ್ಕ ಟೋಪಿಯ ಓರೆಯ ಪರಿಚಿತನ ಮೋರೆಯ
ಬದಲು ಟೈ ಸೂಟಿನ ಪರದೇಶಿ ನೆತ್ತರು ತೊಗಲಿನ,
ದೇವರ ಶಂಕಿಸಿ, ಶಂಕಿಸಿದರೆಂತೋ ಎನುವ ದಿಗಿಲಿನ
ಐದು ದೆವ್ವಗಳ – ಹಾಂಗೊಮ್ಮೆ ಹೀಂಗೊಮ್ಮೆ
ಕುಣಿಯೋಣು ಬಾರಾ–ದ ದ್ವಂದ್ವ

(ನಾನೆಂಬ ಪರಕೀಯ)

ಈ ಕವನದ ಮೂಲಕ ಕವಿ ತನ್ನಲ್ಲಿರುವ ದ್ವಂದ್ವವನ್ನು ಹೊರಹಾಕಿದ್ದಾರೆ. ತನ್ನಲ್ಲಿ ಮನೆ ಮಾಡಿಕೊಂಡಿರುವ ಹಿಂದಿನ–ಇಂದಿನ ಮನೋಭಾವಗಳ ದ್ವಂದ್ವ. ಮತ್ತೊಂದೆಡೆ ತನ್ನ ಸುತ್ತಲಿನ ಧಾರ್ಮಿಕ ಸಂಘರ್ಷದ ದ್ವಂದ್ವ. ಇದು ಕೇವಲ ಸಾಹಿತ್ಯ ವಲಯದ ಅನುಭವವಲ್ಲದೆ ಆಧುನಿಕತೆಗೆ ತೆರೆದುಕೊಂಡವರೆಲ್ಲರ ವೈಚಾರಿಕತೆಗಳ ನಡುವಿನ ಸಂಘರ್ಷಕ್ಕೆ ಸಂಬಂಧಿಸಿದ್ದು ಎಂಬುದನ್ನು ನಿಸಾರ್ ಅವರು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ.

ರಹಮತ್ ತರೀಕೆರೆ ಅವರು ನಿಸಾರ್ ಕಾವ್ಯ ಕುರಿತು ಮಾತನಾಡುತ್ತಾ, "ನಿಸಾರ್ ಬರೆಯಲು ಆರಂಭಿಸಿದ ಮೊದಲ ಘಟ್ಟದಲ್ಲಿ ಕನ್ನಡದಲ್ಲಿ 'ಮುಸ್ಲಿಂ' ಎಂದು ಕರೆಯಲಾಗುವ ಲೇಖಕರು ಬಹಳ ಇರಲಿಲ್ಲ. ತಮ್ಮ ಧಾರ್ಮಿಕ ಸಮುದಾಯದ ಮೂಲಕ ಅನುಭವವನ್ನು ಬಳಸಿಕೊಳ್ಳುವುದಕ್ಕೆ ಮುಜುಗರ ಪಡುವ ಸನ್ನಿವೇಶವಿತ್ತು, ಇದನ್ನು ಮರೆಯುವಂತಿಲ್ಲ" ಎಂದು ಹೇಳುತ್ತಾರೆ. (ಕತ್ತಿಕೆಂಚಿನ ದಾರಿ ಪು.ಸಂ. 42 ಮೂರನೇ ಮುದ್ರಣ 2011). ಇವರ ಈ ಮಾತುಗಳಲ್ಲಿ ಅಲ್ಪಸಂಖ್ಯಾತ ಕವಿಯಾಗಿ ನಿಸಾರ್ ಅನುಭವಿಸಿದ ಸಾಂಸ್ಕೃತಿಕ ಬಿಕ್ಕಟ್ಟು ಹಾಗೂ ಅವರನ್ನು ಪರಕೀಯರೆಂದು ಕಂಡ ಮನೋಭಾವ ಕಂಡುಬರುತ್ತದೆ.

ಉಪಸಂಹಾರ

ಒಟ್ಟಾರೆಯಾಗಿ ಹೇಳುವುದಾದರೆ ನಿಸಾರರ ಕಾವ್ಯ ವಿಭಿನ್ನ ಹಾಗೂ ವಿಶಿಷ್ಟವಾದದ್ದು. ಗೋಪಾಲಕೃಷ್ಣ ಅಡಿಗರು ಹೇಳುವಂತೆ, "ಭಾವವ್ಯಂಜನವನ್ನು ವಿಡಂಬನ ಚತುರುಕ್ತಿಗಳೊಡನೆ ರುಚಿಕರಗೊಳಿಸುವ ಇವರ ಶೈಲಿ ಸಾಮಾನ್ಯ ವಾಚಕರ ಮನಸ್ಸನ್ನೂ ತಟ್ಟಿ ಎಬ್ಬಿಸಬಲ್ಲದು. ಈ ಮಟ್ಟದಲ್ಲಿ ಇವರಷ್ಟು ಕೃತಾರ್ಥರಾದ ಕವಿಗಳು ಬೇರೆ ಇಲ್ಲ" (ನಾನೆಂಬ ಪರಕೀಯ, ಮುನ್ನುಡಿ, ಮೊದಲ ಮುದ್ರಣ– 1991). ಅನೇಕ

ಅವಮಾನ, ಅನುಮಾನ, ಸಾಂಸ್ಕೃತಿಕ ಸಂಕಷ್ಟ ಹಾಗೂ ಪರಕೀಯತೆಯ ನೋವುಗಳನ್ನೆಲ್ಲ ಸಹಿಸಿಕೊಂಡು ಅವಮಾನವಾದಲ್ಲೇ ಸನ್ಮಾನ ಮಾಡಿಸಿಕೊಂಡು 'ನಿತ್ಯೋತ್ಸವ ಕವಿ' ಎಂದೇ ಪ್ರಸಿದ್ಧರಾಗುವ ಮೂಲಕ ಮುಂದಿನ ಯುವ ಪೀಳಿಗೆಗೆ ಮಾದರಿಯಾಗಿ ನಿಲ್ಲುತ್ತಾರೆ. ಅವರ ಕಾವ್ಯ ಕನ್ನಡ ನೆಲದಲ್ಲಿ ಒಂದು ಬಗೆಯ ಶಾಂತಿಯುತ ಕ್ರಾಂತಿಯನ್ನು ಮಾಡಿದೆ ಎಂದರೆ ತಪ್ಪಾಗಲಾರದು. ಇಂದು ನಿಸಾರ್ ಅವರು ಕಾವ್ಯಗಳ ಮೂಲಕ ಕನ್ನಡ ನೆಲದಲ್ಲಿ ಜೀವಂತವಾಗಿದ್ದಾರೆ.

ಪರಾಮರ್ಶನ ಗ್ರಂಥಗಳು:

1. ನಿಸಾರ್ ಅಹಮದ್ ಕೆ.ಎಸ್., (2006), ಸಮಗ್ರ ಕವಿತೆಗಳು, ಬೆಂಗಳೂರು: ಸಪ್ನ ಬುಕ್ ಹೌಸ್.
2. ನಿರ್ದೇಶಕರು, (1985), ರತ್ನಸಂಪುಟ (ಕನ್ನಡ ಭಾವಗೀತೆಗಳ ಸಂಕಲನ), ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
3. ಗಿರಡ್ಡಿ ಗೋವಿಂದರಾಜ, (2010), ಕಾವ್ಯವನ್ನು ಕುರಿತು, ಬೆಂಗಳೂರು: ವಸಂತ ಪ್ರಕಾಶನ.
4. ಶಿವರುದ್ರಪ್ಪ ಜಿ.ಎಸ್., (1979), ಸಾಹಿತ್ಯ ವಾರ್ಷಿಕ – 1979, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
5. ರಾಮಚಂದ್ರ ಗಣಾಪುರ, (2014), ಕೆ.ಎಸ್. ನಿಸಾರ್ ಅಹಮದ್, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
6. ಶಿವರುದ್ರಪ್ಪ ಜಿ.ಎಸ್., (1976), ಸಾಹಿತ್ಯ ವಾರ್ಷಿಕ – 1974, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
7. ಅರವಿಂದ ಮಲಗತ್ತಿ, (2018), ಹೊಸಗನ್ನಡ ಕಾವ್ಯ ಮಾರ್ಗ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.